## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.423/2012

**DW**:2

**ದಿನಾಂಕ 10.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎಸ್.ಬಿ. ವಕೀಲರಿಂದ:**

ನಾನು 4 ಲಕ್ಷಕ್ಕೆ ಖರೀದಿ ಮಾಡಿರುತ್ತೇನೆ. ಖರೀದಿ ಪತ್ರವನ್ನು ಹಾಜರುಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾವು 4 ಲಕ್ಷಕ್ಕೆ ಖರೀದಿ ವ್ಯವಹಾರ ಮಾಡಿಕೊಂಡಿರುತ್ತೇನೆ. ನನ್ನ ಹತ್ತಿರ ಖರೀದಿ ಕರಾರು ಪತ್ರ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಖರೀದಿ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಎಷ್ಟು ಹಣವನ್ನು ಕೊಟ್ಟಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು 1999 ನೇ ಇಸವಿಯತನಕ 1,50,000/- ರೂ.ಗಳನ್ನು ಕೊಟ್ಟಿರುತ್ತೇವೆ ನಂತರ 2008 ನೇ ಇಸವಿಯಲ್ಲಿ 2,50,000/- ರೂ.ಗಳನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮೇಲಿನಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕರಾರು ವೇಳೆಯಲ್ಲಿ 1,50,000/- ರೂ.ಗಳನ್ನು ಮತ್ತು ಖರೀದಿಯ ಸಮಯದಲ್ಲಿ 2,90,000/- ರೂ.ಗಳನ್ನು ನನ್ನ ಸಾಕ್ಷ್ಯಾಪ್ರಮಾಣ ಪತ್ರದಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಗೆ ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಸರ್ವೆ ನಂ.408/4 ಬಿ ಇದು 5 ಎಕರೆ ಇರುತ್ತದೆ. ಸದರಿ 1 ನೇ ಪ್ರತಿವಾದಿಗೆ ಮಹಾವೀರ ಸರ್ಕಲನಲ್ಲಿಯೂ ಸಹ ಜಮೀನು ಇದ್ದು ಅದರ ಸರ್ವೆ ನಂ.408 ವಿಸ್ತೀರ್ಣ 11 ಗುಂಟೆ ಇರುತ್ತದೆ. ಸದರಿ 408 ಸರ್ವೆ ನಂಬರನಲ್ಲಿ ಬೆಳೆ ಏನು ಬೆಳೆಯುವುದಿಲ್ಲ. ಸದರಿ ಜಮೀನುಗಳನ್ನು ಬಿಟ್ಟು 1 ನೇ ಪ್ರತಿವಾದಿಗೆ ಬೇರೆ ಜಮೀನುಗಳು ಇರುವುದಿಲ್ಲ.

ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಸರ್ವೆ ನಂ.408 ಇದು 11 ಗುಂಟೆ ಬಗ್ಗೆ ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.408 ವಿಸ್ತೀರ್ಣ 11 ಗುಂಟೆ ಇರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೇಲ್ಕಂಡ 2 ಆಸ್ತಿಗಳನ್ನು ಬಿಟ್ಟು 1 ನೇ ಪ್ರತಿವಾದಿಗೆ ಬೇರೆ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ



ಹಿರಿಯರ ಆಸ್ತಿ ಇದ್ದ ಬಗ್ಗೆ ಈ ಮೇಲೆ ಹೇಳಿದ 2 ಆಸ್ತಿಗಳನ್ನು ಬಿಟ್ಟು ಬೇರೆ ಆಸ್ತಿ ಬಗ್ಗೆ ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ಸಾಕ್ಷ್ಯಾಪ್ರಮಾಣ ಪತ್ರಿಕೆಗೆ

ನಾನು ಸಹಿ ಮಾಡಿರುತ್ತೇನೆ. ಸಾಕ್ಷ್ಯಾ ಪ್ರಮಾಣ ಪತ್ರಿಕೆಯನ್ನು ಓದಿ ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಕನ್ನಡ ಬರುವುದಿಲ್ಲ ಆದ ಕಾರಣ ಓದಿ ನೋಡಿಲ್ಲವೆಂದು ನುಡಿಯುತ್ತಾರೆ. ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ. ನನಗೆ ನನ್ನ ಮುಖ್ಯ ವಿಚಾರಣೆಯನ್ನು ನನ್ನ ವಕೀಲರು ಓದಿ ಹೇಳಿರುತ್ತಾರೆ. 1 ನೇ ಪ್ರತಿವಾದಿಗೆ ಎನ್.ಎ. ಪ್ಲಾಟುಗಳು ಇರುವ ಬಗ್ಗೆ ನನಗೆ ಗೊತ್ತಿರುತ್ತದೆ. ಎನ್.ಎ. ಪ್ಲಾಟುಗಳ ನಂಬರ ನನಗೆ ಗೊತ್ತಿಲ್ಲ. ಎನ್.ಎ. ಪ್ಲಾಟುಗಳ ನಂಬರನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಎನ್.ಎ. ಪ್ಲಾಟುಗಳು ಯಾರ ಯಾರ ಹೆಸರಿನಲ್ಲಿ ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ.

1 ನೇ ಪ್ರತಿವಾದಿಯು ನನ್ನ ಗಂಡನ ಸ್ವಂತ ತಮ್ಮ ಎಂದರೆ ಸರಿ. 1 ನೇ ಪ್ರತಿವಾದಿಗೆ ಯಾವುದೇ ಕೆಟ್ಟ ಚಟಗಳು ಇರುವುದಿಲ್ಲ ಆದರೆ ಆತನು ದುಡಿಯುವುದಿಲ್ಲ. 1 ನೇ ಪ್ರತಿವಾದಿಯು ಕೈಗಡ ಹಣವನ್ನು ಯಾರಿಂದ ಪಡೆದುಕೊಂಡಿರುತ್ತಾನೆ ಎನ್ನುವ ಚಟ ಇರುತ್ತದೆ ಎಂದು ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದುರಭ್ಯಾಸಗಳು ಇದ್ದು ಅದರ ಗೈರು ಪಾಯಿದೆ ಪಡೆದುಕೊಂಡು ನಾನು 1 ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳ ಬಗ್ಗೆ ಹೇಳದೇ ಖೊಟ್ಟಿಯಾಗಿ ಖರೀದಿ ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ದುರಭ್ಯಾಸಗಳು ಇರುತ್ತವೆ ಮತ್ತು ಸದರಿ ಆಸ್ತಿಗಳನ್ನು ಮಾರಾಟ ಮಾಡಬಹುದು ಎನ್ನುವ ದುರುದ್ದೇಶದಿಂದ ಆತನ ಹೆಂಡತಿಯು ವಾಟ್ನಿ ತರೀಖವಾಗಿ 5 ಎಕರೆ ಆಸ್ತಿಯನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿ. ಬಹಳ ವರ್ಷದಲ್ಲಿ ಸದರಿ 5 ಎಕರೆಯನ್ನು 1 ನೇ ಪ್ರತಿವಾದಿಯ ಹೆಂಡತಿಯು ಬಿಡಿಸಿಕೊಂಡಿರುತ್ತಾರೆ. ಬಿಡಿಸಿಕೊಂಡಾಗಿನಿಂದ ಇಲ್ಲಿಯತನಕ ಸದರಿ 5 ಎಕರೆ ಜಮೀನು ಆತನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿಗೆ 2 ಪ್ಲಾಟುಗಳು ಇದ್ದು ಅದರಲ್ಲಿ ಒಂದರನ್ನು ದನಶೆಟ್ಟಿಯವರಿಗೆ ಮಾರಾಟ ಮಾಡಿರುತ್ತಾನೆ ಮತ್ತು ಇನ್ನೊಂದನ್ನು ಆತನ ಹೆಣ್ಣು ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿ.

ಪ್ಲಾಟ ನಂ.1053/6/1 ಇದು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನ್ನ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿರುತ್ತೇನೆ. ಯಾರ ಹೆಸರಿನಲ್ಲಿ ಸದರಿ ಪ್ಲಾಟ ಇರುತ್ತದೆ ಎಂದು ಮಾಹಿತಿ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ವಾಟ್ನಿ ತರೀಖವಾಗಿ ಒಂದು



ಪ್ಲಾಟನ್ನು ತನ್ನ ಹೆಣ್ಣು ಮಕ್ಕಳಿಗೆ ಬಿಟ್ಟುಕೊಟ್ಟಿದ್ದು ಇನ್ನೊಂದು ಪ್ಲಾಟನ್ನು ತನ್ನ ಹೆಸರಿಗೆ ಬಂದಿದ್ದು ಅದನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳು ಹೊಲದಲ್ಲಿಯೂ ಸಹ ವಾಟ್ನಿಯನ್ನು ಮಾಡಿಕೊಂಡಿರುತ್ತಾರೆ. ಸದರಿ 1 ನೇ ಪ್ರತಿವಾದಿಯು ತನ್ನ ಹೆಂಡತಿ ಮಕ್ಕಳಿಗೆ ಹೊಲದಲ್ಲಿ ಪಾಲು ಕೊಟ್ಟಿದ್ದು ಆದರೆ ಯಾವಾಗ ಮತ್ತು ಎಷ್ಟು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ

ಪ್ರತಿವಾದಿಯು ತನ್ನ ಹೆಣ್ಣು ಮಕ್ಕಳಿಗೆ ಹೊಲದಲ್ಲಿ ಪಾಲು ಕೊಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 4 ಜನ ಹೆಣ್ಣು ಮಕ್ಕಳು ಅವರಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿಯ ಹೆಂಡತಿಯು ತನಗೆ ಬಂದ 5 ಎಕರೆ ಆಸ್ತಿಯನ್ನು ತನ್ನ ಹೆಣ್ಣು ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತಾರೆ ಹೊರತು 1 ನೇ ಪ್ರತಿವಾದಿಯು ಬಿಟ್ಟುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.1 ರಿಂದ 7 ನ್ನು ನಾನೇ ಹಾಜರುಮಾಡಿರುತ್ತೇನೆ. ನಿ.ಡಿ.1 ರಿಂದ 7 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ನಿ.ಡಿ.1 ರಿಂದ 7 ನ್ನು ಯಾವ ಕಾರಣಕ್ಕಾಗಿ ಹಾಜರುಮಾಡಿರುತ್ತೇನೆ ಎಂದು ನನಗೆ ಗೊತ್ತು. ನಿ.ಡಿ.1 ರಿಂದ 7 ಮತ್ತು ಈ ದಾವೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಖರೀದಿ ಕರಾರು ಪತ್ರವನ್ನು ಹಾಜರುಪಡಿಸದೇ ಸುಳ್ಳು ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಿ.ಡಿ.13 ರಲ್ಲಿ ಖರೀದಿ ಹಣ 2,49,000/- ರೂ. ಎಂದು ಬರೆದಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಖರೀದಿ ಕರಾರು ಸಮಯದಲ್ಲಿ ರೂ.1,50,000/- ಮತ್ತು ಖರೀದಿ ಪತ್ರದ ಸಮಯದಲ್ಲಿ ರೂ.2,90,000/- ಎಂದು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ರೂ.4,00,000/- ಹಣವನ್ನು 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ, 1 ನೇ ಪ್ರತಿವಾದಿಗೆ ಮತ್ತು ಇನ್ನೊಬ್ಬರಿಗೆ ಬಂದ ಆಸ್ತಿಗಳು ಹಿರಿಯರ ಆಸ್ತಿ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ತಿಳಿಸದೇ ಮೋಸದಿಂದ ಖರೀದಿ ಮಾಡಿರುವ ಕಾರಣ ಸದರಿ ಖರೀದಿಯು ಅವರಿಗೆ ಬಂಧನಕಾರಕ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೂ ಸಮಪಾಲು ಇದ್ದರು ಸಹ ಅವರಿಗೆ ಅದರಿಂದ ತಪ್ಪಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.



<u>ಮರು ವಿಚಾರಣೆ: ಇಲ್ಲ:</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.